ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಆಗಸ್ಟ್ ೩೦, ೨೦೧೨ (ಭಾದ್ರಪದ ೮, ಶಕ ವರ್ಷ ೧೯೩೪)	ಸಂಚಿಕೆ ೩೫

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

ನಮೂನೆ–1

9ನೇ ನಿಯಮ ನೋಡಿ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಬಸವನ ಬಾಗೇವಾಡಿ

ಅಧಿಸೂಚನೆ

ಶ್ರೀ ನಾನಾಸಾಹೇಬ ಬಾಬು ಪಾತ್ರದ, ರವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಬಸವನ ಬಾಗೇವಾಡಿ ಇಲ್ಲಿ ಸುಶಿಕ್ಷಿತ ಸಹಾಯಕ (ಹೆಚ್ಚುವರಿ)ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು ಶ್ರೀ **ನಾನಾಸಾಹೇಬ ಬಾಬು ಮನಗೂಳಿ** ಎಂದು ಬದಲಾವಣೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ,
ಬಸವನ ಬಾಗೇವಾಡಿ

ಪಿ.ಡಿ. 106

FORM-IV

(SEE RULE-12)

NOTICE

It is hereby notified that the undersigned has changed his/her name from **MALLIKARJUN .S. CHALAWADI** to . **MALLIKARJUN .S. JAMBAGI.**

P.D. C/n 107 **MALLIKARJUN .S. CHALAWADI**

FORM-IV

(SEE RULE-12)

NOTICE

It is hereby noticed that the undersigned has changed his/her name from **MANJULA SHIVAPPA CHAVHAN** to **MANJULA KIRAN NAIK**

P.D. C/n 108 **MANJULA SHIVAPPA CHAVHAN**

FORM-1

(SEE RULE-9)

DEPARTMENT OF WOMEN & CHILD DEVELOPMENT

Office of the Directorate, 1st Floor, M.S. Building, Dr. Ambedkar Veedhi, Bangalore-560001,

NO.NISIPRA/HE.BA/44/2008-09, DATED: 26-05-2012

NOTIFICATION

Smt. M. Savithribai, working as Senior Typist in the Department of Women & Child Development, Office of the Deputy Director, Dharwad District is permitted to change her name as **SUMATHI SHRIKANT BAGALWADI.**

Signature and Designation of the Appointing Authority

P.D. C/n 109

ಕರ್ನಾಟಕ ಲೋಕಸೇವಾ ಆಯೋಗ ಉದ್ಯೋಗ ಸೌಧ ಬೆಂಗಳೂರು.

ವಿಷಯ:– 2011ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯಲ್ಲಿ ಶ್ರೀ ಪಿ. ಸೀನಪ್ಪ, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಇವರು ಕಮ್ಯೂನಿಟಿಡೆವಲಪ್‌ಮೆಂಟ್ ಭಾಗ–2ರ ವಿಷಯದ ಪರೀಕ್ಷಾ ಅವಧಿಯಲ್ಲಿ ಮೊಬೈಲ್ ಪೋನ್ ಮೂಲಕ ಸಂಭಾಷಣೆ ನಡೆಸಿರುವ ದುರಾಚಾರ ಪ್ರಕರಣಕ್ಕೆ ದಂಡನೆ ವಿಧಿಸುವ ಕುರಿತು.

ಓದಲಾಗಿದೆ :

(1) ಶ್ರೀ ಪಿ. ಸೀನಪ್ಪ, ನೋಂದಣಿ ಸಂಖ್ಯೆ.27412 ಇವರಿಗೆ ಆಯೋಗದ ಕಾರಣ ಕೇಳುವ ನೋಟೀಸು ಜಾರಿ ಮಾಡಿದ ಸಂಖ್ಯೆ. ಇಪ(3)15/2012–13/ಪಿಎಸ್‌ಸಿ/ ದಿನಾಂಕ: 19–04–2012

(2) ಶ್ರೀ ಪಿ.ಸೀನಪ್ಪ ಇವರ ಸಮಜಾಯಿಷಿ ದಿನಾಂಕ:25–04–2012.

(3) ಆಯೋಗದ ವಿಚಾರಣೆ ನೋಟೀಸ್ ಸಂಖ್ಯೆ.ಸಿಓಎನ್.103/2012–13/ಪಿಎಸ್‌ಸಿ, ದಿನಾಂಕ: 04–07–2012.

(4) ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ: 18–07–2012.

(5) ದಿನಾಂಕ: 03–08–2012ರ ಆಯೋಗದ ನಡಾವಳಿಗಳು.

ಪ್ರಸ್ತಾವನೆ:–

ಆಯೋಗವು ನಡೆಸಿದ 2011ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಸಂಬಂಧ ದಿನಾಂಕ:**12–01–2012**ರಂದು ನಡೆಸಲಾದ ಕಮ್ಯೂನಿಟಿಡೆವಲಪ್‌ಮೆಂಟ್ ಭಾಗ–2ರ ವಿಷಯದ ಪರೀಕ್ಷೆ ಸಂದರ್ಭದಲ್ಲಿ ಕೊಠಡಿ ಸಂವೀಕ್ಷಕರು ನೀಡಿರುವ ವರದಿಯಂತೆ ನೋಂದಣಿ ಸಂಖ್ಯೆ. 27412ರ ಅಭ್ಯರ್ಥಿ ಶ್ರೀ ಪಿ. ಸೀನಪ್ಪ, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಕಾರಹಳ್ಳಿ ಗ್ರಾಮ ಪಂಚಾಯತ್ ಕಛೇರಿ, ಕಾರಹಳ್ಳಿ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110, ಇವರು ಪರೀಕ್ಷಾ ಸಮಯದಲ್ಲಿ ಮೊಬೈಲ್ ಫೋನ್ ಹೊಂದಿದ್ದು ಮೊಬೈಲ್‌ನಲ್ಲಿ ಸಂಭಾಷಣೆ ಮಾಡುವ ಮೂಲಕ ದುರಾಚಾರ ಎಸಗಿರುತ್ತಾರೆಂದು ದಿನಾಂಕ:17–03–2012ರಂದು ರಹಸ್ಯ ಶಾಖೆಯವರು ವರದಿ ನೀಡಿರುತ್ತಾರೆ.

ಈ ವರದಿ ಮೇರೆಗೆ ಉಲ್ಲೇಖ–(1)ರಲ್ಲಿ ಓದಲಾದ ದಿನಾಂಕ:19–04–2012ರ ನೋಟೀಸಿನಲ್ಲಿ ಆಪಾದಿತ ಅಭ್ಯರ್ಥಿಯಿಂದ ಲಿಖಿತ ಸಮಜಾಯಿಷಿಯನ್ನು ಕೇಳಲಾಗಿತ್ತು. ಸದರಿ ನೋಟೀಸಿಗೆ ಆಪಾದಿತರು ಉಲ್ಲೇಖ–(2)ರಲ್ಲಿ ಓದಲಾದ ದಿನಾಂಕ: 25–4–2012ರ ಸಮಜಾಯಿಷಿಯಲ್ಲಿ ತಮ್ಮ ವಿರುದ್ಧದ ಆರೋಪವನ್ನು ಅಸ್ಪಷ್ಟ ರೀತಿಯಲ್ಲಿ ಒಪ್ಪಿರುತ್ತಾರೆ. ಕಾರಣ ಸದರಿ ಪ್ರಕರಣದ ಸತ್ಯಾಸತ್ಯೆಯನ್ನು ತಿಳಿಯುವ ಸಲುವಾಗಿ ಶ್ರೀಮತಿ ಕೆ.ಟಿ ಪದ್ಮರೇಖ, ಸಹಾಯಕ ಕಾರ್ಯದರ್ಶಿ. ಕರ್ನಾಟಕ ಲೋಕಸೇವಾ ಆಯೋಗ, ಇವರನ್ನು ವಿಚಾರಾಣಾಧಿಕಾರಿಗಳನ್ನಾಗಿ ಹಾಗೂ ಶ್ರೀಮತಿ ಬಿ. ಮಧುಮಾಲತಿ, ಶಾಖಾಧಿಕಾರಿ, ಕರ್ನಾಟಕ ಲೋಕಸೇವಾ ಆಯೋಗ. ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು.

ವಿಚಾರಾಣಾಧಿಕಾರಿಗಳು ಉಲ್ಲೇಖ(4)ರಲ್ಲಿ ಓದಲಾದ ದಿನಾಂಕ:18–07–2012ರ ತಮ್ಮ ವಿಚಾರಣಾ ವರದಿಯಲ್ಲಿ ಶ್ರೀ ಪಿ. ಸೀನಪ್ಪ, ನೋಂದಣಿ ಸಂಖ್ಯೆ.27412 ಇವರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ವಿಚಾರಣಾಧಿಕಾರಿಗಳು ನೀಡಿದ ವರದಿಯನ್ನು ಆಯೋಗದ ಮುಂದೆ ಮಂಡಿಸಲಾಯಿತು. ಆಯೋಗವು ವಿಚಾರಾಣಾಧಿಕಾರಿಗಳ ವರದಿಯನ್ನು ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಒದಗಿಸಲಾದ ದಾಖಲೆ ಸಾಕ್ಷ್ಯ ಇತ್ಯಾದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಭ್ಯರ್ಥಿಯ ವಿರುದ್ಧದ ಆರೋಪವು ಸಾಬೀತಾಗಿರುವುದರಿಂದ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆಗಳ ನಿರ್ವಹಣೆ) ನಿಯಮಗಳು 1965ರನ್ವಯ ಹಾಗೂ ತತ್ಸಂಬಂಧದಲ್ಲಿ ಜಾರಿಗೊಳಿಸಲಾದ ಆಯೋಗ ಅಧಿಕೃತ ಜ್ಞಾಪನ ಸಂಖ್ಯೆ ಆಡಳಿತ.398/1993–94/ಪಿಎಸ್‌ಸಿ, ದಿನಾಂಕ:14–07–1993ರನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಶ್ರೀ ಪಿ.ಸೀನಪ್ಪ, ನೋಂದಣಿ ಸಂಖ್ಯೆ. 27412 ಇವರ 2011ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸುವುದರ ಜೊತೆಗೆ ಆಯೋಗವು ನಡೆಸುವ ಮುಂದಿನ ನಾಲ್ಕು ಅಧಿವೇಶನಗಳ ಇಲಾಖಾ ಪರೀಕ್ಷೆಗಳಿಗೆ ಹಾಜರಾಗದಂತೆ ಡಿಬಾರ್ ಮಾಡುವ ದಂಡನೆಯನ್ನು ವಿಧಿಸುವುದು ಸೂಕ್ತವೆಂದು ಉಲ್ಲೇಖ–(5)ರಲ್ಲಿ ದಿನಾಂಕ:03–08–2012ರಂದು ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ. ಇಪ(3)148/2012–13/ಪಿಎಸ್‌ಸಿ, ಬೆಂಗಳೂರು. ದಿನಾಂಕ:17–08–2012.

ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆಗಳ ನಿರ್ವಹಣೆ) 1965ರ ನಿಯಮ 14ರ ಹಾಗೂ ತತ್ಸಂಬಂಧದಲ್ಲಿ ಹೊರಡಿಸಲಾದ ಆಯೋಗದ ಅಧಿಕೃತ ಜ್ಞಾಪನ ಸಂಖ್ಯೆ ಆಡಳಿತ.398/1993–94/ಪಿಎಸ್‌ಸಿ, ದಿನಾಂಕ:14–07–1993ರನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ನೋಂದಣಿ ಸಂಖ್ಯೆ. 27412 ಅಭ್ಯರ್ಥಿ ಶ್ರೀ ಪಿ.ಸೀನಪ್ಪ, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಕಾರಹಳ್ಳಿ ಗ್ರಾಮಪಂಚಾಯತ್ ಕಛೇರಿ, ಕಾರಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110, ಇವರ ವಿರುದ್ಧದ ಆರೋಪವು ಸಾಬೀತಾಗಿರುವುದರಿಂದ ಈ ಅಭ್ಯರ್ಥಿಯ 2011ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸುವುದರ ಜೊತೆಗೆ ಆಯೋಗವು ನಡೆಸುವ ಮುಂದಿನ ನಾಲ್ಕು ಅಧಿವೇಶನಗಳ ಇಲಾಖಾ ಪರೀಕ್ಷೆಗೆ ಹಾಜರಾಗದಂತೆ ಡಿಬಾರ್ ಮಾಡುವ ದಂಡನೆಯನ್ನು ಈ ಮೂಲಕ ವಿಧಿಸಿದೆ.

ವಿ.ಬಿ. ಪಾಟೀಲ್
ಕಾರ್ಯದರ್ಶಿ ಹಾಗೂ ನಿಯಂತ್ರಕರು,
ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 132

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ, ಕೊಡಗು, ಮಡಿಕೇರಿ

ಅಧಿಸೂಚನೆ ಸಂಖ್ಯೆ : 3/2012 ದಿನಾಂಕಃ 08.08.2012

ವಿಷಯಃ ಕೊಡಗು ಜಿಲ್ಲಾ ನ್ಯಾಯಾಲಯ ಘಟಕದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ 5 ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖಃ
1. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ-I 220/96 ದಿನಾಂಕಃ 08.03.2010.
2. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ– II 36/2003 ದಿನಾಂಕಃ 23.06.2011 ಮತ್ತು ಸರ್ಕಾರಿ ಆದೇಶ ಸಂಖ್ಯೆಃ ಲಾ 230 ಎಲ್‌ಸಿಇ 2010 ಬೆಂಗಳೂರು ದಿನಾಂಕಃ 29.03.2010.
3. ಮಾನ್ಯ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆಃ ಎಲ್‌ಸಿಎ– II 54/2011 ದಿನಾಂಕಃ 01.10.2011.
4. ಜಿಲ್ಲಾ ನ್ಯಾಯಾಲಯ ಅಧಿಸೂಚನೆ ಸಂಖ್ಯೆಃ 2/2011 ದಿನಾಂಕ 02.11.2011.

ಕೊಡಗು ಜಿಲ್ಲಾ ನ್ಯಾಯಾಲಯ ಘಟಕದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಈ ಅಧಿಸೂಚನೆಯ ಜೊತೆ ಲಗತ್ತಿಸಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕಃ **10.09.2012** ಅಪರಾಹ್ನ **5.00** ಗಂಟೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ ಃ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ.

1. ಶೀಘ್ರ ಲಿಪಿಗಾರರು (Stenographer) – 5 ಹುದ್ದೆಗಳು

ಎ) ವೇತನ ಶ್ರೇಣಿಃ ರೂ. 14550–350–15600–400–17200–450–19000–500–21000–600–24600–700–26700 + ಇತರೆ ಭತ್ಯೆಗಳು.

ಬಿ) ಹುದ್ದೆಗಳ ವರ್ಗೀಕರಣಃ

ªVðÃPg t	Evg	UÁ«ÄÃ t	ªiÁ.¸í	CAU«P® C¨ïyð	MlÄÖ
¥.eÁ	-	-	-	1	1
¥í ªUð-2J	-	1	-	-	1
¥í ªUð-3©	1	-	-	-	1
¸Á-ªUð	1	-	1	-	2
MlÄÖ	2	1	1	1	5

±ÉÃPÀët P «zÁåºÀðvÉ

i) P£ÁðlP ¥ËæqÀ ²PÀët ¥jÃPÉë ªÀÄAqÀ½AiÀÄ £qɸÀĪÀ J¸ï.J¸ï.J¯ï.¹ ¥jÃPÉëAiÀİè GwÛÃtðvÉ CxÀªÁ vvÀìªÀiÁ£À «zÁåºÀðvÉ.

ii) P£ÁðlP ¥ËæqÀ ²PÀët ¥jÃPÉë ªÀÄAqÀ½AiÀĪÀgÀÄ £qɸÀĪÀ P£ÀßqÀ ªÀÄvÀÄÛ DAU\ ¥ËæqÀ zÉeð (Senior Grade Shorthand) ²ÃWÀæ°¦ ºÁUÀÆ P£ÀßqÀ ªÀÄvÀÄÛ DAU\ ¥ËæqÀ zÉeð ¨ÉgÀ¼ÀZÀÄ (Senior Grade Typewriting) ¥jÃPÉë CxÀªÁ vvÀìªÀiÁ£À ¥jÃPÉëAiÀİè GwÛÃtðgÁVgÀ¨ÉÃPÀÄ.

DAiÀÄÌAiÀÄ «zÁ£À: C¨sÀåyðU¼À ¥jÃPÉëU¼À° U½¹gÀĪÀ MlÄÖ ±ÃPÀqÁªÁgÀÄ CAPU¼À ªÀÄvÀÄ ¤«ÄµÀ MAzÀPÌ 120 ¥zU¼ zgzÀ° 5 ¤«ÄµÀU¼ GP¯ÃR£ÀªÀ£ÀÄß vÉUzÀÄPÆAqÀÄ, GP¯ÃR£ÀªÀ£ÀÄß 45 ¤«ÄµÀU¼° C£ÀĪÁ¦ ªÀiÁqÀĪÀ C¨sÀåyðU¼À ¥jÃPÉëAiÀİè U½¸ÀĪÀ CAPU¼À ªÀÄvÀÄ ¸Az±Àð£zÀ° U½¸ÀĪÀ CAPU¼ DzÁgzÀ ªÄÃ¯É DAiÀÄÌ ªÀiÁqÀ¯ÁUÀĪÀÅzÀÄ.

ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳಲ್ಲಿ ಮಾಜಿ ಸೈನಿಕ ಅಭ್ಯರ್ಥಿಗಳು, ಅಂಗವಿಕಲ ಅಭ್ಯರ್ಥಿಗಳು, ಹಾಗೂ ಗ್ರಾಮೀಣ ಅಭ್ಯರ್ಥಿಗಳು ಮೀಸಲಾತಿಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿರದೇ ಇದ್ದ ಪಕ್ಷದಲ್ಲಿ, ಆ ಹುದ್ದೆಗಳನ್ನು ಆಯಾ ಪಂಗಡಗಳ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಆಯಾ ಪಂಗಡಗಳ ಇತರೆ ಅಭ್ಯರ್ಥಿಗಳೂ ಸಹ ಲಭ್ಯವಾಗದಿದ್ದಲ್ಲಿ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಹೊರತುಪಡಿಸಿ ಇನ್ನುಳಿದ ಹಿಂದುಳಿದ ವರ್ಗಗಳ ಹುದ್ದೆಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಅರ್ಹತಾ ಪರೀಕ್ಷೆಗೆ ಹಾಗೂ ಸಂದರ್ಶನಕ್ಕೆ ಆಯ್ಕೆಯಾಗುವ ಅಭ್ಯರ್ಥಿಗಳು ಮಡಿಕೇರಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿಗೆ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

ಆಯ್ಕೆ ವಿಧಾನಃ

ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ ಲಿಪಿಕ ಮತ್ತು ಇತರ ಹುದ್ದೆಗಳ (ನೇಮಕಾತಿ)(ತಿದ್ದುಪಡಿ) ನಿಯಮ 2007ರ ಪ್ರಕಾರ ನಡೆಸಲಾಗುವುದು.

ವಯೋಮಿತಿಃ

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಯು

ಅ) ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

ಆ) ಗರಿಷ್ಠ ವಯೋಮಿತಿ.

ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಕೆಳಕಂಡ ಗರಿಷ್ಟ ವಯಸ್ಸನ್ನು ಮೀರಕೂಡದು.

ಸಾಮಾನ್ಯ ವರ್ಗ	35 ವರ್ಷ
2ಎ, 2ಬಿ, 3ಎ ಮತ್ತು 3 ಬಿ	38 ವರ್ಷ
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ I	40 ವರ್ಷ

E) ªAiÀĹÌ£À «ÄwAiÀÄ£ÀÄß ºÁ° PvðªÀå ¤ªÀð»¸ÀÄwgÀĪÀ gÁdå/PÃAzÀæ ¸PÁðj £ËPÀggÀÄ/ªÀiÁf ¸ÉʤPÀgÀÄ/CAU«PÀ® C¨sÀåyðU¼À ºÁUÀÆ «zÀªÀAiÀÄg §U P.¹.J¸ï. ¸ÁªÀiÁ£Àå £ÃªÀÄPÁw ¤AiÀĪÀÄU¼À 1977g ¥ÀæPÁg ¸rºÀPÀAiÀÄ£ÀÄß PÆqÀ¯ÁUÀĪÀÅzÀÄ.

¥j«ÃPÀëuÁ CªÀ¢

DAiÀÄÌAiÁz C¨sÀåyðU¼À P£ÁðlP ¸ÃªÁ ¤AiÀĪÀÄ (¥j«ÃPÀëu ¤AiÀĪÀÄU¼À) 1977g ¥ÀæPÁg 02 ªµðU¼ PÁ® ¥j«ÃPÀëuÁ CªÀ¢AiÀÄ°gÀÄvÁg. F CªÀ¢AiÀÄ° C¨sÀåyðU¼À F ºÀÄzU ¤U¢¥r¹gÀĪÀ E¯ÁSÁ ¥jÃPÉëU¼° ªÀÄvÀÄ P£ÀßqÀ ¨ÁµÁ ¥jÃPÉëAiÀİè GwÛÃtðgÁU¨ÉÃPÀÄ.

¸PÁðj ¸ÃªÁAiÀİgÀĪÀ C¨sÀåyðU¼À Cfð ¸°¸ÀĪÀ «zÁ£À

¸PÁðj ¸ÃªÁAiÀİgÀĪÀ C¨sÀåyðU¼À vªÀÄä £ÃªÀÄPÁw ¥ÁæzsPÁgÀ¢Az ¤gÁPÉëÃ¥uÁ ¥ÀæªÀiÁt¥vÀæªÀ£ÀÄß ¥qzÀÄ, Cfð¼£ÀÄß ¸A§A¢v £ÃªÀÄPÁw ¥ÁæzsPÁgz ªÀÄÆ®P P¼À»¸À¨ÉÃPÀÄ.

Cfð ¸°¸Äª «zÁ£B

F C¢¸ÆZ£AiÄ° ®Uw¹gÄª Cfð £ªÄÆ£AiÄ£Ä ¨g¼ZÄ ªiÁr/ PA¥Çl gï ªÄÆ®P vAiiÁj¹/ CfðAiÄ£Ä vªÄ ¸Av P§gº zº vªÄU C£¬Ä¸Äª J¯Á CAPtU¼£Ä ¨wð ªiÁqÄªÀzÄ. C¨ÀyðAiÄÄ vªÄ EwÃa£ ¥Á¸ï¥Çmïð C¼vAiÄ ¨Áªav ª£Ä CfðAiÄ ªÄÃ¯ CAn¹, Czg ªÄ®Æ ¸º ¸» ªiÁqÄªÀzÄ ºÁUÆ Cfð £ªÄÆ£AiÄ PÆ£AiÄ° WÆÃµuAiÄ £Avg ¸» ªiÁqÄªÀzÄ. ºÄzU ¸A§A¢¹z «zÁºðv, ªAiÄ¸Ä ªÄvÄ PÆÃjgÄª «ÄÃ¸¯ÁwU ¸A§A¢¹zAv ¥ªiÁt ¥vU¼£Ä C¢Pv C¢PÁjU½Az ¥qzÄ, CªÀU¼ £P®ÄU¼£Ä ¸AiÄA zÃrÃPj¹ CfðAiÆA¢U ®Uw¹ CfðAiÄ£Ä "f¯Á ªÄvÄ ¸v £ÁAiiÁ¢Ã±gÄ, f¯Á ªÄvÄ ¸v £ÁAiiÁ®AiÄ, PÆqUÄ, ªÄrPÃj –571201" EªjU ¢£ÁAPB 10.09.2012 C¥gÁºÀ 5.00 UAmAiÆ¼U v®Ä¥ªAv P¼Ä»¸ÄªÀzÄ.

C¨ÀyðU¼Ä ¤U¢v Cfð £ªÄÆ£AiÆA¢U ®Uw¸¨ÃPÁz zÁR¯ÁwU¼ÄB

1. EwÃa£ ¥Á¸ï¥ÇÃmïð C¼vAiÄ ¨Áªav.

2. d£ ¢£ÁAPz zÃrÃPgtPÁV J¸ï.J¸ï.J¯ï.¹ CAP ¥n/ PÄªÄÄ¯Ãnªï gPÁqïð/ E£ÁªÀzÃ C¢Pv zÁR¯ÁwU¼Ä.

3. «zÁºðvAiÄ §U CAP¥nU¼Ä.

4. ¥j²µÖ eÁw C¨ÀyðU¼Ä £ªÄÆ£ 'r' AiÄ°, ªÄvÄ 2J, ªÄvÄ 3© U ¸Ãjz C¨ÀyðU¼Ä £ªÄÆ£ 'J¥ï' £° ¸A§A¢¹z v°²Ã¯ÁgjAz eÁw ºÁUÆ DzÁAiÄ zÃrÃPgt ¥ªiÁt ¥vU¼£Ä ¥qzÄ ¸°¸¨ÃPÄ.

5. UÁ«ÄÃt «ÄÃ¸¯ÁwAiÄ£Ä PÆÃgÄª C¨ÀyðU¼Ä ¸PÁðj DzÃ± ¸ASB ¹D¸ÄE/96/¸£¤/2005, ¢£ÁAPB 10.08.2005g ¥PÁg ¤U¢v £ªÄÆ£-2 gº C¢Pv C¢PÁjU½Az ¥qzÄ Cz£Ä ¸A§A¢¹z PÃv ²PuÁ¢PÁjAiÄªjAz ªÄÃ®Ä ¸» ªiÁr¹ ¸°¸¨ÃPÄ. UÁ«ÄÃt «ÄÃ¸¯Áw PÆÃgÄª ¥j²µÖ eÁw, ¥j²µÖ ¥AUq ºÁUÆ »AzÀ½z ªUðU½U ¸Ãjz C¨ÀyðU¼Ä «ÄÃ¸¯Áw ¥ªiÁt ¥vU¼Ä wg¸ÌvUÆAq° CªgÄ UÁ«ÄÃt «ÄÃ¸¯ÁwUÆ C£ºðgÁVgÄvÁg.

6. UÁ«ÄÃt «ÄÃ¸¯ÁwAiÄ£Ä PÆÃgÄª ¸ÁªiÁ£ ªUðz C¨ÀyðU¼Ä ¥ªiÁt ¥vª£Ä £ªÄÆ£–2 g eÆv £ªÄÆ£-1 g®Æ zÃrÃPgt ¥vª£Ä ¸°¸ÄªÀzÄ.

7. CAU«P® «ÄÃ¸¯ÁwAiÄ£Ä PÆÃgÄª C¨ÀyðU¼Ä ªÀzÀQÃAiÄ ¥ªiÁt ¥vª£Ä ¢£ÁAPB 19.11.2005g ¸PÁðgz C¢Pv eÁ¥£Á ¸ASB ¹D¸ÄE/115/¸£¤/2005gº ¤U¢¥r¹z £ªÄÆ£AiÄ° CAU«P®vAiÄ §U f¯Á ªÄlÖz ªÀzÀQÃAiÄ ªÄAq½¬ÄAz ¥ªiÁt ¥vª£Ä ¥qzÄ ¸°¸¨ÃPÄ.

8. ªiÁf ¸¤P «ÄÃ¸¯ÁwAiÄ£Ä PÆÃgÄª C¨ÀyðU¼Ä ¸¤P ¸Ãª¬ÄAz ©qÄUqAiiÁz/ «ªÄÀQ ºÆA¢z §UV£ ¥ªiÁt ¥vª£Ä ¸°¸ÄªÀzÄ.

9. «zªAiÄgÄ, fÃv PÁ«ÄðPgÄ ºÁUÆ ªAiÆÃ«Äw jAiiÁ¬Äw PÆÃg®Ä ¸PªÄ ¥Á¢PÁg¢Az ¥qz ¥ªiÁt ¥vª£Ä ¸°¸ÄªÀzÄ.

10. ¸ÁAiÄA «¼Á¸«gÄª gÆ.5/- CAZ aÃn CAn¹gÄª ®PÆÃmAiÄ£Ä CfðAiÆA¢U ®Uw¸ÄªÀzÄ.

11. £ÃªÄPUÆAq C¨ÀyðU½U ¸PÁðgz C¢¸ÆZ£ ¸ASB J¥ï.r (¸µ¯ï) 04B¦.E.n 2005 ¨AU¼ÆgÄ, ¢£ÁAPB 31.03.2006g ¥PÁg ºÆ¸ ¦AZt AiÆÃd£ (w.e.f 01.04.2006) C£ÁAiÄªÁUÄªÀzÄ.

«±Ãµ ¸ÆZ£B

1. CfðAiÆA¢U ®Uw¹gÄª J¯Á ¥ªiÁt ¥vU¼Ä Cfð ¸°¸®Ä ¤U¢¥r¹gÄª PÆ£AiÄ ¢£ÁAPzÆ¼U ®Uw¹g¨ÃPÄ E®ªÃ PÆ£AiÄ ¢£ÁAPzAzÄ ¹AzÄªÁVg¨ÃPÄ ªÄvÄ PqÁAiÄªÁV ¸ÁAiÄA zÃrÃPj¸¨ÃPÄ.

2. AiiÁªÀzÃ C¨ÀyðAiÄÄ ¸PÁðj/ ¸PÁðgÃvg C¢PÁjU½Az v£ C¨Àyðvz §U ¥¨Áª ©Ãjzg CAvº C¨ÀyðU¼Ä £ÃªÄPÁwU CºðgÁUÄªÀ¢®.

3. AiiÁªÀzÀ C¨sÀyðAiÀÄ ¸Az±ð£z §U ªiÁ»w §g¢zg, CªgÀ ¸Az±ð£PÌ Cºðg® JAzÀ w½AiÀÄªÀzÀ ªÀvÀ F §U AiiÁªÀzÀ ¥vÀ ªÀª ºÁgª£À ªiÁq¯ÁUÀªÀ¢®.

4. Cfð U½£À ¹ÃPj¸®Ä ¤U¢¥r¹z ¢£ÁAPzAzÀ ¸ÁªðdP geAiiÁVzg ªÀÄA¢£ PbÃj P®¸z ¢£ Cfð ¸º¸®Ä PÆ£AiÀ ¢£ÁAP JAzÀ w½AiÀÄªÀzÀ.

5. C¥Çtð ªÀvÀ PqÁAiÀªÁV ®Uw¸¨ÃPÁz zÁR¯ÁwU¼£À ®Uw¹gz ºÁUÆ PÆ£AiÀ ¢£ÁAPz £Avg §Az Cfð U¼£À ¥jUt¸¯ÁUÀªÀ¢®.

J¸ï. Dgï. ¸ÆÃªÀ±ÃRg
f¯Á ºÁUÆ ¸vÀ £ÁAiiÁ¢Ã±gÀ,
PÆqUÀ, ªÀrPÃj.

ಶೀಘ್ರಲಿಪಿಗಾರರ ಹುದ್ದೆಗಾಗಿ ಅರ್ಜಿ ನಮೂನೆ

ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ ಸಹಿ ಮಾಡುವುದು.

ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

ಮಾನ್ಯರೇ,

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧಿಸೂಚನೆ ಸಂಖ್ಯೆ: 3/2012 ದಿನಾಂಕಃ 08.08.2012ರ ಪ್ರಕಾರ ನಾನು ಕೆಳಕಂಡ ಮಾಹಿತಿಗಳೊಂದಿಗೆ ಶೀಘ್ರಲಿಪಿಗಾರರ ಹುದ್ದೆಗೆ ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

1.	ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ)			
2.	ತಂದೆ/ ಗಂಡನ ಹೆಸರು			
3.	ತಾಯಿಯ ಹೆಸರು			
4.	ಜನ್ಮ ದಿನಾಂಕ			
5.	ವಯಸ್ಸು (ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಯ ವಯಸ್ಸು)	ವರ್ಷಗಳು	ತಿಂಗಳುಗಳು	ದಿನಗಳು
6.	ಅಭ್ಯರ್ಥಿಯ ಖಾಯಂ ವಿಳಾಸ ಮತ್ತು ದೂರವಾಣಿ ಸಂಖ್ಯೆ			
7.	ಲಿಂಗ	ಪುರುಷ/ಮಹಿಳೆ		

8.	ರಾಷ್ಟ್ರೀಯತೆ ಃ ಧರ್ಮ ಃ				
9.	ಜಾತಿ/ಉಪಜಾತಿ				
10.	ನೀವು ಯಾವುದಾದರೂ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿದ್ದೀರಾ?				
11.	ನೀವು ಸರ್ಕಾರಿ ಸೇವೆಯಿಂದ ಅಥವಾ ಇನ್ನಾವುದಾದರೂ ಸೇವೆಯಿಂದ ವಜಾ ಆಗಿದ್ದೀರಾ ಅಥವಾ ತೆಗೆದುಹಾಕಲ್ಪಟ್ಟಿದ್ದೀರಾ?				
12.	**ಶೈಕ್ಷಣಿಕ ವಿದ್ಯಾರ್ಹತೆ**	ಉತ್ತೀರ್ಣ ಹೊಂದಿದ ವರ್ಷ	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡಾವಾರು ಅಂಕಗಳು
ಎ	ಎಸ್‌ಎಸ್‌ಎಲ್‌ಸಿ /ತತ್ಸಮಾನ ವಿದ್ಯಾರ್ಹತೆ				
ಬಿ	ಕನ್ನಡ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆ				
ಸಿ	ಇಂಗ್ಲೀಷ್ ಶೀಘ್ರಲಿಪಿ ಪ್ರೌಢದರ್ಜೆ ಪರೀಕ್ಷೆ				
ಡಿ	ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆ				
ಇ	ಇಂಗ್ಲೀಷ್ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆ				
13.	**ಕೋರುವ ಮೀಸಲಾತಿಗಳುಃ** (ಕೋರುವ ಮೀಸಲಾತಿಯನ್ನು ✓ಚಿಹ್ನೆ ಹಾಕುವುದರ ಮೂಲಕ ಗುರುತಿಸಿ ಪ್ರಮಾಣಪತ್ರದ ಸ್ವಯಂ ದೃಢೀಕೃತ ನಕಲನ್ನು ಲಗತ್ತಿಸಬೇಕು)	ಸಾಮಾನ್ಯ	ಪ.ಜಾತಿ	ಪ್ರವರ್ಗ 2ಎ	ಪ್ರವರ್ಗ 3ಬಿ
14.	**ನೀವು ಈ ಯಾವುದಾದರೂ ಮೀಸಲಾತಿ ಅಡಿಯಲ್ಲಿ ಬರುತ್ತೀರಾ?** (ಸೇರುವ ಮೀಸಲಾತಿಯನ್ನು ✓ಚಿಹ್ನೆ ಹಾಕುವುದರ ಮೂಲಕ ಗುರುತಿಸಿ ಪ್ರಮಾಣಪತ್ರದ ಸ್ವಯಂ ದೃಢೀಕೃತ ನಕಲನ್ನು ಲಗತ್ತಿಸಬೇಕು)	ಗ್ರಾಮೀಣ	ಮಾ.ಸೈ	ಅಂ.ಅ	ಇತರೆ

ಸೂಚನೆಃ ಅಭ್ಯರ್ಥಿಗಳು ಎಲ್ಲಾ ಕಾಲಂಗಳನ್ನು ಖಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

ಃಘೋಷಣೆಃ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ಸತ್ಯವಾಗಿದ್ದು ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ತಾವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಬದ್ಧನಾಗಿರುತ್ತೇನೆ/ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡ ಪಕ್ಷದಲ್ಲಿ ಕೊಡಗು ಜಿಲ್ಲೆಯ ಯಾವುದೇ ನ್ಯಾಯಾಲಯದಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿರುತ್ತೇನೆ/ಸಿದ್ಧಳಿರುತ್ತೇನೆ.

ದಿನಾಂಕಃ ಅಭ್ಯರ್ಥಿಯ ಸಹಿ

ಸ್ಥಳಃ

ಪಿ.ಆರ್. 136

ಜಿಲ್ಲಾಧಿಕಾರಿಯವರ ಕಛೇರಿ ತುಮಕೂರು ಜಿಲ್ಲೆ ತುಮಕೂರು,

ಸಂಖ್ಯೇ:ಗ್ರಾ.ಲೆ.ಸಿಬ್ಬಂದಿ.ಸಿಆರ್. 266/10-11 ದಿನಾಂಕ: 07-08-2012

ತಿದ್ದುಪಡಿ ಅಧಿಸೂಚನೆ

ತುಮಕೂರು ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ 101 ಗ್ರಾಮಲೆಕ್ಕಿಗರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಕಂಇ 04 ಬಿಎಸ್‌ಸಿ 2011 ದಿನಾಂಕ 25.02.2011ರಲ್ಲಿ ತಿಳಿಸಿರುವಂತೆ ಪರಿಷ್ಕೃತ ನಿಯಮಗಳಂತೆ ನೇರ ನೇಮಕಾತಿ ಮಾಡಲು ಹಾಲಿ ತುಮಕೂರು ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ 81 ಗ್ರಾಮಲೆಕ್ಕಿಗರ ಹುದ್ದೆಗಳು ಹಾಗೂ ಹೊಸ ನಾಡ ಕಛೇರಿಗಳಲ್ಲಿ ಸೃಜಿಸಲಾಗಿರುವ 20 ಗ್ರಾಮಲೆಕ್ಕಿಗರ ಹುದ್ದೆಗಳಿಗೆ ವರ್ಗೀಕರಣ ಮತ್ತು ಮೀಸಲಾತಿ ಅನ್ವಯ ಕರ್ನಾಟಕ ನಾಗರಿಕ ಸೇವೆಗಳು (Revenue subordinate Branch) (Cadre & Recruitment) (Amendment) ನಿಯಮಗಳು 2008ರ ನಿಯಮ 2ರ ಮತ್ತು 2009ರ ಅನ್ವಯ ನೇಮಕಾತಿಯನ್ನು ಮಾಡಲು ಪ್ರಾಧಿಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂಧ **ಅರ್ಜಿಗಳನ್ನು ಅನ್ ಲೈನ್ ಮೂಲಕ ಆಹ್ವಾನಿಸಲಾಗಿದೆ.**

ಜಿಲ್ಲೆಯಲ್ಲಿ ಖಾಲಿ ಇರುವ ಒಟ್ಟು 101 ಗ್ರಾಮಲೆಕ್ಕಿಗರ ಹುದ್ದೆಗಳ ವರ್ಗೀಕರಣ ಈ ಕೆಳಕಾಣಿಸಿದಂತೆ ಮಾಡಲಾಗಿದೆ. ನೇಮಕಾತಿಯಲ್ಲಿ 1ನೇ ಸೈಕಲ್‌ನ ರೋಸ್ಟರ್ ಬಿಂದು 81 ರಿಂದ 100 ಹಾಗೂ 2ನೇ ಸೈಕಲ್‌ನ ರೋಸ್ಟರ್ ಬಿಂದು 1 ರಿಂದ ಪುನರಾರಂಭಿಸಿ 81ರ ವರೆಗೆ ಒಟ್ಟು 101 ಹುದ್ದೆಗಳಿಗೆ ವರ್ಗೀಕರಿಸಲಾಗಿದೆ.

2012-13ನೇ ಸಾಲಿಗೆ ಈ ಜಿಲ್ಲೆಯಲ್ಲಿ ಖಾಲಿ ಇರುವ ಒಟ್ಟು 101 ಹುದ್ದೆಗಳಿಗೆ ವರ್ಗೀಕರಣ

ಕ್ರ. ಸಂ	ಮೀಸಲಾತಿ	ಸಾಮಾನ್ಯ	ಕನ್ನಡ ಮಾಧ್ಯಮ	ಮಹಿಳೆ	ಯೋಜನಾ ನಿರಾಶ್ರಿತರು	ಗ್ರಾಮೀಣ	ಮಾಜಿ ಸೈನಿಕ	ಅಂಗವಿಕಲ	ಒಟ್ಟು
1	**2**	**3**	**4**	**5**	**6**	**7**	**8**	**9**	**10**
1	ಪ.ಜಾ	3	1	5	1	4	1	1	**16**
2	ಪ.ಪಂ	0	0	1	0	1	0	1	**3**
3	ಪ್ರ.1	1	0	2	0	1	0	0	**4**
4	ಪ್ರ-2(ಎ)	3	1	4	1	4	1	1	**15**
5	ಪ್ರ-2(ಬಿ)	1	0	1	0	1	0	1	**4**
6	ಪ್ರ-3(ಎ)	1	0	1	0	1	0	1	**4**
7	ಪ್ರ-3(ಬಿ)	1	0	2	0	1	0	1	**5**
8	ಸಾಮಾನ್ಯ	10	2	15	2	13	5	3	**50**
	ಒಟ್ಟು	**20**	**4**	**31**	**4**	**26**	**7**	**9**	**101**

1. **ಅರ್ಜಿಯನ್ನು ಸಲ್ಲಿಸುವ ವಿಧಾನ :-**

ಅರ್ಜಿಯನ್ನು ಅನ್-ಲೈನ್ [online] ಅಂತರ್ಜಾಲ (Internet) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2. **ಅರ್ಜಿ ಶುಲ್ಕ:-**

ಸರ್ಕಾರದ ಸುತ್ತೋಲೆ ಸಂ.ಕಂಇ 34 ಪ್ರಕಾ 2009, ದಿನಾಂಕ 26.09.2009ರಂತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-1/ಮಹಿಳೆ	ರೂ.100=00/-
ಸಾಮಾನ್ಯ / ವರ್ಗ 2ಎ/2ಬಿ/3ಎ/3ಬಿ	ರೂ.200=00/-

3. **ಅನ್-ಲೈನ್ ಅರ್ಜಿ ಸಲ್ಲಿಸುವ ವಿಧಾನ :-**

ಅಭ್ಯರ್ಥಿಯು ತುಮಕೂರು ಜಿಲ್ಲಾ ಕಂದಾಯ ಘಟಕದ ಅಧಿಕೃತ ವೆಬ್-ಸೈಟ್ http://tumkur-va.kar.nic.in ತೆರೆದು ಕಂಪ್ಯೂಟರ್ ಪರದೆಯ ಮೇಲೆ ಅರ್ಜಿಯನ್ನು ತುಂಬಬೇಕು. ಅಭ್ಯರ್ಥಿಯು Submit Button ಅನ್ನು ಒತ್ತಿದರೆ ಅರ್ಜಿ ಸಂಖ್ಯೆ (Reference Number) ನೊಂದಿಗೆ (Acknowledgement

slip) ಹಾಗೂ ದ್ವಿಪ್ರತಿ ಚಲನ್ ಸೃಷ್ಠಿಯಾಗುತ್ತದೆ. ಹೀಗೆ ಅರ್ಜಿಯನ್ನು ಅನ್ ಲೈನ್ ಮೂಲಕ ಸಲ್ಲಿಸಿದ ನಂತರ ದ್ವಿಪ್ರತಿ ಚಲನ್‌ನಲ್ಲಿ ಅರ್ಜಿ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇದರ ಯಾವು ದಾದರೂ ಶಾಖೆಯಲ್ಲಿ ಪಾವತಿಸಬೇಕು. ಅಭ್ಯರ್ಥಿಗಳು ಸ್ವೀಕೃತಿ ಸ್ಲಿಫ್‌ಅನ್ನು ಮತ್ತು ಶುಲ್ಕ ಪಾವತಿಸಿದ ಚಲನ್ ಒಂದು ಪ್ರತಿಯನ್ನು ಕಡ್ಡಾಯವಾಗಿ ತಮ್ಮ ಬಳಿ ಇರಿಸಿಕೊಳ್ಳತಕ್ಕದ್ದು ಇನ್ನೊಂದು ಚಲನ್ ಪ್ರತಿ ಬ್ಯಾಂಕ್ ಬಳಿ ಇರುತ್ತದೆ. ಈ ದಾಖಲೆಗಳನ್ನು ಪರಿಶೀಲನೆಗೆ ನಿಗಧಿ ಪಡಿಸಿದ ದಿನಾಂಕ 04.10.2012ರಂದು ತಾತ್ಕಾಲಿಕ ಪಟ್ಟಿಯಲ್ಲಿ ಪ್ರಕಟಿಸಲಾಗುವ ಅಭ್ಯರ್ಥಿಗಳು ಹಾಜರುಪಡಿಸತಕ್ಕದ್ದು. ಬ್ಯಾಂಕಿನಲ್ಲಿ ನಿಗಧಿತ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 12.09.2012 ಆಗಿರುತ್ತದೆ. ನಿಗಧಿತ ಅರ್ಜಿ ಶುಲ್ಕ ಹೊರತುಪಡಿಸಿ ಯಾವು ದೇ ವಿಧವಾದ ಬ್ಯಾಂಕ್ ಶುಲ್ಕ ಇತ್ಯಾದಿ ಪಾವತಿಸುವ ಅವಶ್ಯಕತೆ ಇರುವು ದಿಲ್ಲ. ನಗದು, ಡಿ.ಡಿ, ಪೋಸ್ಟಲ್ ಆರ್ಡರ್ ಮತ್ತು ಮನಿ ಆರ್ಡರ್ ಇವು ಗಳನ್ನು ಸ್ವೀಕರಿಸಲಾಗುವು ದಿಲ್ಲ. ಅಲ್ಲದೆ ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವು ದಿಲ್ಲ. ಅಥವಾ ಅದನ್ನು ಇತರ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಅಭ್ಯರ್ಥಿಗಳು ಅರ್ಜಿಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕ ಒಳಗೆ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.

A) ಅರ್ಜಿಗಳನ್ನು ದಿನಾಂಕ 10.08.2012ರಿಂದ 10.09.2012ರ ಒಳಗೆ ಸಲ್ಲಿಸತಕ್ಕದ್ದು.

B) ಅರ್ಜಿ ಶುಲ್ಕವನ್ನು ದಿನಾಂಕ 10.08.2012ರಿಂದ 12.09.2012ರ ವರೆಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕ್‌ನ ಶಾಖೆಯಲ್ಲಿ ಬ್ಯಾಂಕ್ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು. ಹಾಗೂ ಶುಲ್ಕ ಪಾವತಿ ನಂತರ ಅನ್‌ಲೈನ್ ಮೂಲಕ ತಂತ್ರಾಂಶದ ಸೂಚನೆಯನ್ನು ಪಾಲಿಸಿ ಸ್ಕ್ಯಾನ್ ಮಾಡಿದ ಚಲನ್ ಅಪ್‌ಲೋಡ್ (Uploading Challan Option) ಮಾಡತಕ್ಕದ್ದು.

C) ಅಭ್ಯರ್ಥಿಗಳು ಅನ್‌ಲೈನ್‌ನಲ್ಲಿ ನಿಗಧಿತ ಶುಲ್ಕ ಪಾವತಿಯ ಕುರಿತು ವಸ್ತು ಸ್ಥಿತಿಯನ್ನು http://tumkur-va.kar.nic.in ರಲ್ಲಿ (Status ಅನ್ನು) ಶುಲ್ಕ ಪಾವತಿಸಿದ 5 ದಿನಗಳ ನಂತರ ಪರಿಶೀಲಿಸಿಕೊಳ್ಳಬಹುದು.

4. **ಅರ್ಹತಾ ಷರತ್ತುಗಳು:–**

A) ಭಾರತೀಯ ನಾಗರೀಕನಾಗಿರತಕ್ಕದ್ದು.

B) ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವದೇ ದೈಹಿಕ / ಮಾನಸಿಕ ನ್ಯೂನತೆಯಿಂದ ಮುಕ್ತರಾಗಿರತಕ್ಕದ್ದು.

C) ಅಭ್ಯರ್ಥಿಯು ಈ ಹಿಂದೆ ಯಾವುದೇ ಸರ್ಕಾರದ ಸೇವೆಯಿಂದ ವಜಾಗೊಂಡಿರಬಾರದು.

5. **ಶೈಕ್ಷಣಿಕ ವಿದ್ಯಾರ್ಹತೆ:–**

ದ್ವಿತೀಯ ಪಿ.ಯು.ಸಿ ಅಥವಾ ಸಿ.ಬಿ.ಎಸ್.ಸಿ / ಐ.ಸಿ.ಎಸ್.ಸಿ ನಡೆಸುವ 12 ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.(ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿಸಲ್ಲಿಸುವ ದಿನಾಂಕಕ್ಕೆ ಮುಂಚಿತವಾಗಿ ತೇರ್ಗಡೆ ಹೊಂದಿರತಕ್ಕದ್ದು)

6. **ವೇತನ ಶ್ರೇಣಿ:** –ರೂ. **11600–200–12000–250–13000–300–14200–350–15600–400–17200–450–19000–500–21000**

ವಯೋಮಿತಿ:– ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 10.09.2012ಕ್ಕೆ ಅಭ್ಯರ್ಥಿಯು ಈ ಕೆಳಕಂಡಂತೆ ವಯೋಮಿತಿ ಹೊಂದಿರತಕ್ಕದ್ದು.

a) ಕನಿಷ್ಟ 18 ವರ್ಷ

b) ಗರಿಷ್ಟ ವಯೋಮಿತಿ.

ಸಾಮಾನ್ಯ ವರ್ಗ	**35 ವರ್ಷ**
2ಎ, 2ಬಿ, 3ಎ, 3ಬಿ	**38 ವರ್ಷ**
ಪ.ಜಾತಿ/ಪ.ಪಂಗಡ /ಪ್ರವರ್ಗ–1	**40 ವರ್ಷ**

ಎಸ್.ಎಸ್.ಎಲ್.ಸಿ ಅಥವಾ ವರ್ಗಾವಣೆ ಪ್ರಮಾಣ ಪತ್ರ [ಟಿ.ಸಿ] ಅಥವಾ ಕ್ಯೂಮಿಲೇಟಿವ್ ರೆಕಾರ್ಡ್‌ನಲ್ಲಿ ನಮೂದಿಸಿರುವ ಜನ್ಮ ದಿನಾಂಕವನ್ನು ಆಯ್ಕೆ ಪ್ರಾಧಿಕಾರವು ಪರಿಗಣಿಸುವುದು. ಇತರೆ ಯಾವು ದೇ ದಾಖಲೆಗಳನ್ನು ಪರಿಗಣಿಸಲಾಗುವು ದಿಲ್ಲ. ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ)ನಿಯಮಗಳು 1977 ರ ನಿಯಮ 6 ರಂತೆ ವಯೋಮಿತಿಯನ್ನು ಅದರಲ್ಲಿ ತಿಳಿಸಿರುವ ಮಟ್ಟಿಗೆ ಸಂಬಂಧಪಟ್ಟ ದಾಖಲೆ ಒದಗಿಸಿದಲ್ಲಿ ಹೆಚ್ಚಿಸುವ ಬಗ್ಗೆ ಮೂಲ ದಾಖಲೆಗಳ ಪರಿಶೀಲನೆ ವೇಳೆ ಪರಿಶೀಲಿಸಲಾಗುವು ದು. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 6ರಂತೆ ಗರಿಷ್ಠ ವಯೋಮಿತಿಯನ್ನು ಈ ಮುಂದಿನ ಪ್ರಕರಣಗಳಲ್ಲಿ ಮುಂದೆ ಹೇಳಿರುವಷ್ಟರ ಮಟ್ಟಿಗೆ ಹೆಚ್ಚಿಸಲು ಅವಕಾಶವಿದೆ.

c) ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪಿಸಲಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿನ ಸರ್ಕಾರದಿಂದ ಸ್ಥಾಪಿತವಾಗಿದ್ದು ಮತ್ತು ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ನಿಗಮದ ಅಡಿಯಲ್ಲಿ ಹುದ್ದೆಯನ್ನು ಧಾರಣ ಮಾಡಿರುವ ಅಥವಾ ಧಾರಣ ಮಾಡಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ ಆತ ಅಂಥ ಹುದ್ದೆಯನ್ನು ಧಾರಣೆ ಮಾಡಿರುವಷ್ಟು ಅಥವಾ ಧಾರಣೆ ಮಾಡಿದ್ದಷ್ಟು ಅಥವಾ (ಹತ್ತು) ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

d) ಮಾಜಿ ಸೈನಿಕನಾಗಿರುವ ಅಭ್ಯರ್ಥಿಯ ಸಂದರ್ಭದಲ್ಲಿ ಮೂರು ವರ್ಷಗಳು ಮತ್ತು ಇದಕ್ಕೆ ಕೇಂದ್ರದ ಸಶಸ್ತ್ರ ಪಡೆಗಳಲ್ಲಿ ಅವನು ಸೇವೆ ಸಲ್ಲಿಸಿರುವಷ್ಟು ವರ್ಷಗಳನ್ನು ಸೇರಿಸಬೇಕು.

e) ಪೂರ್ಣಾವಧಿ ಕೆಡೆಟ್ ಇನ್ ಸ್ಟ್ರಕ್ಟರ್ ಆಗಿ ಸೇವೆ ಸಲ್ಲಿಸಿದ ತರುವಾಯ, ರಾಷ್ಟ್ರೀಯ ಕೆಡೆಟ್ ದಳದಿಂದ ಬಿಡುಗಡೆ ಮಾಡಿದ ಅಭ್ಯರ್ಥಿಯ ಸಂದರ್ಭದಲ್ಲಿ, ಹಾಗೆ ಕೆಡೆಟ್ ಇನ್‌ಸ್ಟ್ರಕ್ಟರಾಗಿ ಆತನು ಸೇವೆ ಸಲ್ಲಿಸಿರುವಷ್ಟು ವರ್ಷಗಳು.

f) ರಾಜ್ಯ ಸರ್ಕಾರ ಪ್ರಾಯೋಜಿತ ಗ್ರಾಮೀಣ ಕೈಗಾರೀಕರಣ ಯೋಜನೆಯಲ್ಲಿ ನೇಮಕಗೊಂಡ ಗ್ರಾಮ ಸಮೂಹ ಇನ್ಸ್‌ಪೆಕ್ಟರಾಗಿ ಆತ ಸೇವೆ ಸಲ್ಲಿಸಿರುವಷ್ಟು ವರ್ಷಗಳು.

g) ಅಂಗವಿಕಲನಾಗಿರುವ ಸಂದರ್ಭದಲ್ಲಿ ಹತ್ತು ವರ್ಷಗಳು.

h) ಈ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಹುದ್ದೆಯನ್ನು ಧಾರಣೆ ಮಾಡಿರುವ ಅಥವಾ ಧಾರಣ ಮಾಡಿದ್ದ ಅಭ್ಯರ್ಥಿಯ ಸಂದರ್ಭದಲ್ಲಿ ಅಂಥ ಹುದ್ದೆಯನ್ನು ಆತನು ಧಾರಣೆ ಮಾಡಿರುವಷ್ಟು ಅಥವಾ ಧಾರಣೆ ಮಾಡಿದ್ದಷ್ಟು ವರ್ಷಗಳು ಅಥವಾ ಐದು ವರ್ಷಗಳು ಇವು ಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

i) ಅಭ್ಯರ್ಥಿ ವಿಧವೆಯಾಗಿದ್ದಲ್ಲಿ ಹತ್ತು ವರ್ಷಗಳು.

j) ಜೀತ ಕಾರ್ಮಿಕನಾಗಿದ್ದ ಅಭ್ಯರ್ಥಿಯಾಗಿದ್ದಲ್ಲಿ ಹತ್ತು ವರ್ಷಗಳು.

8. **ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:**

ಆ) ಜಾತಿ ಮೀಸಲಾತಿ ಕೋರಬಯಸುವ:

a. ಪ.ಜಾ/ಪ.ಪಂ. ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ (ಅನುಬಂಧ–1)

b. ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ'ನಲ್ಲಿ (ಅನುಬಂಧ–7)

c. 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ 'ಎಫ್'ನಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. (ಅನುಬಂಧ–8) ಈ ಪ್ರಮಾಣ ಪತ್ರಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ (10.09.2012) ರೊಳಗೆ ಪಡೆದಿರಬೇಕು.

ಆ) ಜಾತಿ ಮೀಸಲಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣಪತ್ರದ ಬಗ್ಗೆ ಜಿಲ್ಲಾಧಿಕಾರಿ, (ಅಧ್ಯಕ್ಷರು, ಜಾತಿ ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

9. **ಗ್ರಾಮೀಣ ಅಭ್ಯರ್ಥಿ:**

a) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಂತೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.

b) ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ, ಪ್ರವರ್ಗ–1, 2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ನಮೂನೆ 2ರಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು.

c) ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–2ರ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ನಮೂನೆ–1ರಲ್ಲಿ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದಿಟ್ಟುಕೊಂಡಿರತಕ್ಕದ್ದು. (ಅನುಬಂಧ–2, ನಮೂನೆ–1 ಮತ್ತು 2)

ಸೂಚನೆ: ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ನಮೂನೆ–2ರಲ್ಲಿಯ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲುರುಜು ಪಡೆದಿರತಕ್ಕದ್ದು. (ಈ ಪ್ರಮಾಣ ಪತ್ರಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ (10.09.2012) ರೊಳಗೆ ಪಡೆದಿರಬೇಕು.)

10. **ಕನ್ನಡ ಮಾಧ್ಯಮ ಅಭ್ಯರ್ಥಿ:–** ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಯರ ಸಹಿ ಮತ್ತು ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲುರುಜು ಪಡೆದಿರತಕ್ಕದ್ದು. (ಈ ಪ್ರಮಾಣ ಪತ್ರಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ (10.09.2012) ರೊಳಗೆ ಪಡೆದಿರಬೇಕು.) (ಅನುಬಂಧ–3)

11. **ಯೋಜನಾ ನಿರ್ವಸಿತ ಅಭ್ಯರ್ಥಿ:–** ಯೋಜನೆಗಳಿಂದ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ. ಸಿಆಸುಇ 44 ಸೇನೇನಿ 2001, ದಿನಾಂಕ.27/07/2001ರಲ್ಲಿ ನಿಗಧಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು (ಅನುಬಂಧ–5)ರಲ್ಲಿ ಪಡೆದುಕೊಂಡಿರತಕ್ಕದ್ದು. (ಈ ಪ್ರಮಾಣ ಪತ್ರಗಳು ಈ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ (10.09.2012) ರೊಳಗೆ ಪಡೆದಿರಬೇಕು.)

12. **ಅಂಗವಿಕಲರ ಮೀಸಲಾತಿ ಬಗ್ಗೆ:** ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1–ಎ) ರ ಅನ್ವಯ ರಾಜ್ಯ ಸಿವಿಲ್ ಸೇವೆಯಲ್ಲಿನ ಗ್ರೂಪ್ ಸಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡ 5 ರಷ್ಟು ಸಮತಳ ಮೀಸಲಾತಿ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಸೆನೆನಿ 2006 ದಿನಾಂಕ:01.08.2009ರಂತೆ ಮೀಸಲಾತಿ ನೀಡಲಾಗುವುದು. ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 52 SSR 99 ದಿನಾಂಕ:23.06.2012ರಂತೆ ಗ್ರಾಮಲೆಕ್ಕಿಗರ ಹುದ್ದೆಗಳಲ್ಲಿ ಅಂಗವಿಕಲರ ಮೀಸಲಾತಿಯನ್ನು ಈ ಕಾಣಿಸಿದ ವರ್ಗಗಳಿಗೆ ಮಾತ್ರ ಕಲ್ಪಿಸಲಾಗಿದೆ.

1. ಕುಷ್ಠ ರೋಗದಿಂದ ಗುಣಮುಖರಾದವರು **(Leprosy cured)** 2. ಶ್ರವಣದೋಷವುಳ್ಳವರು **(Hearing impaired)**

3. ದೈಹಿಕ ಅಂಗವಿಕಲರು **(Loco motor Disability)** 4. ಮಾನಸಿಕ ಅಸ್ವಸ್ಥತೆಯಿಂದ ಗುಣಮುಖರಾದವರು **(Mentally ill)**

ಈ ಮೇಲಿನ ಅಂಗವಿಕಲರು ಹೊರತುಪಡಿಸಿ ಇತರ ದೈಹಿಕ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಗ್ರಾಮಲೆಕ್ಕಿಗರ ಹುದ್ದೆಗೆ ಅರ್ಜಿಸಲ್ಲಿಸಲು ಅರ್ಹರಿರುವುದಿಲ್ಲ. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೆನೆನಿ 2005, ದಿನಾಂಕ:19.11.2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯು ನೀಡುವ ಪ್ರಮಾಣ ಪತ್ರವನ್ನು ಪಡೆದುಕೊಂಡಿರತಕ್ಕದ್ದು. ಬೇರೆ ಯಾವುದೇ ನಮೂನೆಗಳಲ್ಲಿ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸಲು ಬರುವುದಿಲ್ಲ. ಈ ಪ್ರಮಾಣ ಪತ್ರದ ನಮೂನೆಯನ್ನು ಲಗತ್ತಿಸಿದೆ. (ಅನುಬಂಧ–4)

<u>ಸೂಚನೆ:–</u> ಈ ಮೇಲಿನ ಎಲ್ಲಾ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 10.09.2012ರೊಳಗೆ ಅರ್ಹತೆಯನ್ನು ಪಡೆದಿರಬೇಕು. ಪ್ರಮಾಣ ಪತ್ರಗಳ ನಮೂನೆಗಳನ್ನು ಅನುಬಂಧ–1 ರಿಂದ 8ರ ವರೆಗೆ ನೋಡಬಹುದು. ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಪ್ರಕಟಗೊಂಡ ಅಭ್ಯರ್ಥಿಗಳು ಮಾತ್ರ ನಿಗದಿತ ದಿನಾಂಕ.04.10.2012ರಂದು ಪೂರ್ವಾಹ್ನ 10.00 ಗಂಟೆಗೆ ನೇಮಕಾತಿ ಪ್ರಾಧಿಕಾರದ ಎದುರು (ಜಿಲ್ಲಾಧಿಕಾರಿಯವರ ಕಛೇರಿ ತುಮಕೂರು ಜಿಲ್ಲೆ ಇಲ್ಲಿ) ಮೂಲ ಪ್ರಮಾಣ ಪತ್ರಗಳನ್ನು ತಪ್ಪದೆ ಹಾಜರುಪಡಿಸತಕ್ಕದ್ದು. ಮೂಲ ಪ್ರಮಾಣ ಪತ್ರಗಳನ್ನು ಹಾಜರ್ಪಡಿಸದಿರುವ ಅಭ್ಯರ್ಥಿಗಳ ಗ್ರಾಮಲೆಕ್ಕಿಗರ ಹುದ್ದೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕೃತಗೊಳಿಸಲಾಗುವು ದು.

13. **ಆಯ್ಕೆ ವಿಧಾನ:–** ಕರ್ನಾಟಕ ಜನರಲ್ ಸರ್ವೀಸಸ್ (Revenue Subordinate Branch) (Cadre & Recruitment) (ತಿದ್ದುಪಡಿ) ನಿಯಮಗಳು 2008 ಮತ್ತು 2009 ಹಾಗೂ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ಅಭ್ಯರ್ಥಿಯನ್ನು ಅವರು ದ್ವಿತೀಯ ಪಿ.ಯು.ಸಿ. ಪರೀಕ್ಷೆ ಅಥವಾ CBSE ಅಥವಾ ICSE ನಡೆಸುವ 12ನೇ ತರಗತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ (on merit) ಆಧಾರದ ಮೇಲೆ ಆಯಾಯ ಮೀಸಲಾತಿ ಪ್ರವರ್ಗಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಲಾಗುವುದು. ನಿಯಮಾವಳಿಯಂತೆ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ದಿನಾಂಕ.24.09.2012ರಂದು ಪ್ರಕಟಿಸಲಾಗುವುದು.

14. **ಪ್ರಮುಖ ಸೂಚನೆಗಳು:**

ದಿನಾಂಕ.24.09.2012ರಂದು ಪ್ರಕಟಗೊಳ್ಳುವ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಈ ಕೆಳಕಂಡ ಮೂಲ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ದಿನಾಂಕ:04.10.2012ರಂದು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. ಹಾಗೂ ಮೂಲ ಪ್ರಮಾಣ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಯಿಂದ ದೃಡೀಕೃತ ಜೆರಾಕ್ಸ್ ನಕಲನ್ನು ಜೊತೆಯಲ್ಲಿ ಹಾಜರ್ಪಡಿಸತಕ್ಕದ್ದು.

- ❖ ಪಿ.ಯು.ಸಿ. ಪರೀಕ್ಷೆ ಅಥವಾ CBSE ಅಥವಾ ICSE ನಡೆಸುವ 12ನೇ ತರಗತಿ ಪರೀಕ್ಷೆಯ ಪ್ರಮಾಣಪತ್ರ.
- ❖ ಹುಟ್ಟಿದ ದಿನಾಂಕದ ಪ್ರಮಾಣ ಪತ್ರ (ಎಸ್.ಎಸ್.ಎಲ್.ಸಿ.) ಅಥವಾ ಕ್ಯುಮುಲೇಟಿವ್ ದಾಖಲೆ)

- ❖ ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಸೇವಾ ಪ್ರಮಾಣ ಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (No Objection Certificate) ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ಪಡೆದಿಟ್ಟುಕೊಂಡಿರಬೇಕು. (ಅನುಬಂಧ–6)
- ❖ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡ (ಅನುಬಂಧ–1, ನಮೂನೆ–ಡಿ) ಮತ್ತು ಪ್ರವರ್ಗ–1 (ಅನುಬಂಧ–7, ನಮೂನೆ–ಇ) ಹಾಗೂ 2ಎ, 2ಬಿ, 3ಎ, 3ಬಿ (ಅನುಬಂಧ–3, ನಮೂನೆ–ಎಫ್) ಮೀಸಲಾತಿ ಅಭ್ಯರ್ಥಿಗಳು ಕ್ರಮವಾಗಿ ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರಗಳನ್ನು ಪಡೆದಿಟ್ಟು ಕೊಂಡಿರತಕ್ಕದ್ದು.
- ❖ ಯೋಜನಾ ನಿರಾಶ್ರಿತ ಅಭ್ಯರ್ಥಿಗಳು, ವಿಧವೆಯರು, ಜೀತ ಕಾರ್ಮಿಕರು, ಗ್ರಾಮ ಸಮೂಹ ಪರಿಶೀಲಕರು ಮತ್ತು ಕ್ಯಾಡೆಟ್ ಪರಿವೀಕ್ಷಕರು ಇವರುಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ. (ಅನುಬಂಧ–5)
- ❖ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ. (ಅನುಬಂಧ–2)
- ❖ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ. (ಅನುಬಂಧ–3)
- ❖ ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿಹೊಂದಿದ ಬಗೆಗಿನ ಪ್ರಮಾಣ ಪತ್ರ.
- ❖ ಅಂಗವಿಕಲ ಅಭ್ಯರ್ಥಿಗಳು ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ . (ಅನುಬಂಧ–4)
- ❖ ಕಂಪ್ಯೂಟರ್ ಜ್ಞಾನ (ಬೇಸಿಕ್) ಹೊಂದಿರುವ ಬಗ್ಗೆ ಪ್ರಮಾಣ ಪತ್ರ.

15. **ಸಾಮಾನ್ಯ ಸೂಚನೆಗಳು:**

1. ನೈತಿಕ ದುರ್ನಡತೆಯಿಂದಾಗಿ/ ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ರಾಜ್ಯ/ಕೇಂದ್ರ/ ಸ್ಥಳೀಯ ಸಂಸ್ಥೆ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ ಅಥವಾ ನೀತಿ ಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ ವಜಾ ಮಾಡಲ್ಪಟ್ಟಿದ್ದು ಕಂಡು ಬಂದಲ್ಲಿ ನೇಮಕಾತಿಗೆ ಅನರ್ಹರಾಗಿರುತ್ತಾರೆ.

2. ಅರ್ಜಿಯಲ್ಲಿ ತಪ್ಪು/ ಸುಳ್ಳು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುತ್ತದೆ ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

3. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ಎಲ್ಲಾ ಪತ್ರ ವ್ಯವಹಾರಗಳನ್ನು ಅದೇ ವಿಳಾಸಕ್ಕೆ ಕಳುಹಿಸಿ ಕೊಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರವನ್ನು ಪರಿಗಣಿಸಲಾಗುವುದಿಲ್ಲ.

4. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್‌ಲೈನ್ ಮುಖಾಂತರ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಪಾಲಿಸಬೇಕು.

5. ತಾತ್ಕಾಲಿಕ ಪಟ್ಟಿ ಪ್ರಕಟಗೊಂಡ ನಂತರದಲ್ಲಿ ಅಭ್ಯರ್ಥಿಗಳಿಂದ ದಿನಾಂಕ–03.10.2012ರವರೆಗೆ ಆಕ್ಷೇಪಣೆ ಸ್ವೀಕರಿಸಲಾಗುವು ದು. ನಂತರದಲ್ಲಿ ಬಂದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವು ದು.

6. ಅಭ್ಯರ್ಥಿಗಳ ಅರ್ಹತೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.

7. ದಿನಾಂಕ–24.09.2012ರಂದು ಪ್ರಕಟಿಸಲಾಗುವ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು http://tumkur.nic.in ಪ್ರಕಟಿಸಲಾಗುವುದು. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಪರಿಶೀಲನೆಗೆ ಹಾಜರಾಗಲು ಪ್ರತ್ಯೇಕವಾಗಿ ಪತ್ರ ವ್ಯವಹಾರ ಈ ಪ್ರಾಧಿಕಾರದಿಂದ ಮಾಡಲಾಗುವುದಿಲ್ಲ.

8. ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆಪಟ್ಟಿಯಲ್ಲಿ ಬಂದಿದೆ ಎಂಬುದರ ಆಧಾರದ ಮೇಲೆ ಅಭ್ಯರ್ಥಿಗೆ ನೇಮಕಾತಿಯ ಯಾವುದೇ ಹಕ್ಕು ದೊರೆಯುವುದಿಲ್ಲ.

9. ಸರ್ಕಾರದಿಂದ ಆಗಿಂದಾಗ್ಗೆ ನೇರ ನೇಮಕಾತಿಯಲ್ಲಿ ಮೀಸಲಾತಿಗೆ ಸಂಬಂದಿಸಿದಂತೆ ಹೊರಡಿಸಲಾಗುವ ಸುತ್ತೋಲೆ/ಅಧಿಸೂಚನೆ ಅಥವಾ ಸ್ಪಷ್ಟೀಕರಣಗಳನ್ವಯ ಕ್ರಮವಹಿಸಲಾಗುತ್ತದೆ.

10. ಆಯ್ಕೆ ಸಂಬಂಧವಾಗಿ ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ಇರುವುದಿಲ್ಲ.

11. ಅರ್ಜಿ ತುಂಬುವ ವಿಧಾನ ಹಾಗೂ ಹೆಚ್ಚಿನ ವಿವರಗಳು ತುಮಕೂರು ಜಿಲ್ಲಾಧಿಕಾರಿ ಕಛೇರಿಯ ಅಧಿಕೃತ ವೆಬ್‌ಸೈಟ್ http://tumkur.nic.in ಮತ್ತು http://tumkur-va.kar.nic.in ರಲ್ಲಿನ ಮಾಹಿತಿ ಸೂಚಿಯಲ್ಲಿ ಲಭ್ಯವಿರುತ್ತದೆ. ಮತ್ತು ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಸಹಾಯವಾಣಿ ಸಂಖ್ಯೆ:**0816–2278718**ಕ್ಕೆ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಆರ್.ಕೆ.ರಾಜು
ಜಿಲ್ಲಾಧಿಕಾರಿ, ಹಾಗೂ ಅಧ್ಯಕ್ಷರು
ಗ್ರಾಮಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ.
ತುಮಕೂರು ಜಿಲ್ಲೆ, ತುಮಕೂರು.

ಪಿ.ಆರ್. 135

f¯Á ªÀvÀ ¸vÀ £ÁåAiÀiÁ¢Ã±g ªg PÁAiÀiÁð®AiÀ, AiÀiÁzVj.

C¢¸ÆZ£ ¸ASÉ B J r JAJ£ï **3 : 2012** ¢£ÁAP: **08 .08.2012**

ವಿಷಯ : ಬೆರಳಚ್ಚುಗಾರ ಮತ್ತು ಬೆರಳಚ್ಚು–ನಕಲುಗಾರರ ಹುದ್ದೆಗಳ ನೇರ ನೇಮಕಾತಿ ಬಗ್ಗೆ.

ಉಲ್ಲೇಖ : 1) ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ : ಎಲ್‌ಸಿಎ – II 52 : 2010 ದಿನಾಂಕ : 30.04.2010 ವಿವಿಧ ಹುದ್ದೆಗಳನ್ನು ತುಂಬುವ ಅನುಮತಿಯ ಬಗ್ಗೆ.

2) ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ : ಎಲ್‌ಸಿಎ –II 52 : 2010 ದಿನಾಂಕ : 03.02.2011 ವಿವಿಧ ಹುದ್ದೆಗಳನ್ನು ತುಂಬುವ ಅನುಮತಿಯ ಬಗ್ಗೆ.

3) ಸರಕಾರಿ ಆದೇಶ ಸಂಖ್ಯೆ ಲಾ 153 ಎಲ್‌ಎಸಿ–2010 ದಿನಾಂಕ:24–1–2010 ಖಾಲಿ ಇರುವ 30 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮಂಜೂರಾತಿ ನೀಡುವ ಕುರಿತು.

4) ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ : ಎಲ್‌ಸಿಎ – II 54 : 2011 ದಿನಾಂಕ : 01.10.2011 ವಿವಿಧ ಹುದ್ದೆಗಳನ್ನು ತುಂಬುವ ಅನುಮತಿಯ ಬಗ್ಗೆ.

5) ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) (ನೇಮಕಾತಿ) ನಿಯಮ 1982.

6) ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮ 2007.

7) ಕರ್ನಾಟಕ ನಾಗರಿಕ ಸೇವಾ ಸಾಮಾನ್ಯ ನೇಮಕಾತಿ ನಿಯಮ –1977

ಮೇಲ್ಕಂಡ ಅಧಿಸೂಚನೆಯನ್ವಯ ಯಾದಗಿರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ ಬೆರಳಚ್ಚುಗಾರರು – 08 ಮತ್ತು ಬೆರಳಚ್ಚು–ನಕಲುಗಾರರು – 04 ಹುದ್ದೆಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಅಧಿಸೂಚನೆಯಲ್ಲಿ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **07.09.2012** ಸಂಜೆ **5.00** ಗಂಟೆಯೊಳಗೆ.

I. ಬೆರಳಚ್ಚುಗಾರರು

ಹುದ್ದೆಗಳ ಸಂಖ್ಯೆ : 08

ವೇತನ ಶ್ರೇಣಿ: 11600–200–12000–250–13000–300–14200–350–15600–400–17200–450–19000–500–21000 ಹಾಗೂ ಇತರೆ ಭತ್ಯೆಗಳು.

ಹುದ್ದೆಯ ವರ್ಗೀಕರಣ :

ವರ್ಗೀಕರಣ	**ಇತರರು**	**ಮಹಿಳಾ ಅಭ್ಯರ್ಥಿ**	**ಗ್ರಾಮೀಣ ಅಭ್ಯರ್ಥಿ**	**ಅಂಗವಿಕಲ ಅಭ್ಯರ್ಥಿ**	**ಒಟ್ಟು ಹುದ್ದೆಗಳು**
ಸಾಮಾನ್ಯ ಅಭ್ಯರ್ಥಿ	1	1	2	–	4
ಪರಿಶಿಷ್ಟ ಜಾತಿ	–	1	1	–	2
ಪ್ರವರ್ಗ – 2ಎ	–	1	–	–	1
ಪ್ರವರ್ಗ – 2ಬಿ	1	–	–	–	1
ಒಟ್ಟು	**2**	**3**	**3**	–	**8**

ವಿದ್ಯಾರ್ಹತೆ :

1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

2) ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬೆರಳಚ್ಚು ಪ್ರೌಢದರ್ಜೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು

ಆಯ್ಕೆಯ ವಿಧಾನ :

ಅಭ್ಯರ್ಥಿಯು ಸುಮಾರು 15 ನಿಮಿಷಗಳ ಕಾಲ ನೀಡುವ ಉಕ್ತಲೇಖನವನ್ನು ಬೆರಳಚ್ಚು ಮಾಡತಕ್ಕದ್ದು ಮತ್ತು ಈ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳಿದ್ದು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ಪಡೆದಿರಬೇಕು.

V. ಬೆರಳಚ್ಚು–ನಕಲುಗಾರರ ಹುದ್ದೆ

1. ಹುದ್ದೆಗಳ ಸಂಖ್ಯೆ : 04

ವೇತನ ಶ್ರೇಣಿ : 11600–200–12000–250–13000–300–14200–350–15600–400–17200–450–19000–500–21000 ಹಾಗೂ ಇತರೆ ಭತ್ಯೆಗಳು.

ಹುದ್ದೆಯ ವರ್ಗೀಕರಣ :

ವರ್ಗೀಕರಣ	ಇತರರು	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಒಟ್ಟು ಹುದ್ದೆಗಳು
ಸಾಮಾನ್ಯ ಅಭ್ಯರ್ಥಿ	–	1	–	–	01
ಪರಿಶಿಷ್ಟ ಜಾತಿ	1	1	–	–	2
ಪರಿಶಿಷ್ಟ ಪಂಗಡ	1	–	–	–	1
ಒಟ್ಟು	**2**	**2**	–	–	**4**

ವಿದ್ಯಾರ್ಹತೆ :

1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

2) ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬೆರಳಚ್ಚು ಕಿರಿಯ ದರ್ಜೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಆಯ್ಕೆಯ ವಿಧಾನ :

ಅಭ್ಯರ್ಥಿಯು ಸುಮಾರು 15 ನಿಮಿಷಗಳ ಕಾಲ ನೀಡುವ ಉಕ್ತಲೇಖನವನ್ನು ಬೆರಳಚ್ಚು ಮಾಡತಕ್ಕದ್ದು ಮತ್ತು ಈ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳಿದ್ದು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ಪಡೆದಿರಬೇಕು.

ಸೂಚನೆಗಳು :

1) ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ : **07.09.2012** ರಂದು ಸಂಜೆ **5–00** ಗಂಟೆಯೊಳಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಕಡೆಯ ದಿನಾಂಕವು ಸಾರ್ವಜನಿಕ ರಜೆ ದಿನವಾಗಿದ್ದ ಪಕ್ಷದಲ್ಲಿ ಮುಂದಿನ ಕೆಲಸದ ದಿನಾಂಕ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನವಾಗಿರುತ್ತದೆ.

2) ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸಬೇಕು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ಕಚೇರಿ, ಯಾದಗಿರಿ, ಜಿಲ್ಲೆ : ಯಾದಗಿರಿ.

I) ವಯೋಮಿತಿ :

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರಬೇಕು.

1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ – 1 ಅಭ್ಯರ್ಥಿಗಳು 40 ವರ್ಷಗಳು ಮೀರಿರಬಾರದು.

2) ಪ್ರವರ್ಗ – 2ಎ, 2ಬಿ, 3ಎ ಹಾಗೂ 3ಬಿಗೆ ಸೇರಿದ ಅಭ್ಯರ್ಥಿಗಳು 38 ವರ್ಷಗಳು ಮೀರಿರಬಾರದು.

3) ಸಾಮಾನ್ಯ ಅಭ್ಯರ್ಥಿಗಳು 35 ವರ್ಷಗಳು ಮೀರಿರಬಾರದು.

4) ಅಂಗವಿಕಲರಿಗೆ ಮತ್ತು ವಿಧವೆಯರಿಗೆ ವಯೋಮಿತಿಯಲ್ಲಿ 10 ವರ್ಷಗಳ ಸಡಿಲಿಕೆ ಉಂಟು.

ii) ಮೀಸಲಾತಿ ಹಾಗೂ ವಯೋಮಿತಿ ರಿಯಾಯತಿ ಕೋರಿದಲ್ಲಿ ಹಾಜರುಪಡಿಸಬೇಕಾದ ಸ್ವಯಂ ದೃಢೀಕೃತ ಪ್ರಮಾಣಪತ್ರಗಳು.

1) ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಯಲ್ಲಿ ತಹಶೀಲ್ದಾರರಿಂದ ಪಡೆದಿರುವ ಜಾತಿ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು.

2) ಗ್ರಾಮೀಣ ಮೀಸಲಾತಿ ಕೋರುವ ವರ್ಗದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ / 96 / ಸೇನನಿ /2005 ದಿನಾಂಕ : 10.08.2005ರ ಪ್ರಕಾರ ನಿಗದಿತ ನಮೂನೆ 2ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಅದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ರುಜು ಮಾಡಿಸಿ ಸಲ್ಲಿಸಬೇಕು.

3) ಗ್ರಾಮೀಣ ಮೀಸಲಾತಿಯನ್ನು ಕೋರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರಮಾಣಪತ್ರ ನಮೂನೆ – 2ರ ಜೊತೆ ನಮೂನೆ – 1ರಲ್ಲೂ ದೃಢೀಕರಣ ಪತ್ರವನ್ನು ಸಲ್ಲಿಸುವುದು.

ಪರಿವೀಕ್ಷಣಾ ಅವಧಿ :

ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಸೇವಾ ನಿಯಮ (ಪರಿವೀಕ್ಷಣಾ ನಿಯಮಗಳು) – 1977ರ ಪ್ರಕಾರ ಎರಡು ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ. ಆ ಅವಧಿಯಲ್ಲಿ ಅಭ್ಯರ್ಥಿಗಳು ಅವರ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳನ್ನು ಮತ್ತು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು.

ಆಯ್ಕೆಯ ವಿಧಾನ :

ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ಅಧಿನಿಯಮ 2007ರ ಮತ್ತು ಸಂಬಂಧಪಟ್ಟ ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ 1977ರ ಪ್ರಕಾರ ನಡೆಸಲಾಗುವುದು.

ಅಭ್ಯರ್ಥಿಗಳು ಅರ್ಜಿಯೊಂದಿಗೆ ಕೆಳಕಂಡ ದಾಖಲೆಗಳ ದೃಢೀಕೃತ ನಕಲುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಯಾವ ಸೂಚನೆಯನ್ನು ನೀಡದೇ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1) ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಬೆರಳಚ್ಚು ಮಾಡಿಸಿ ಕಂಪ್ಯೂಟರ್‌ನಲ್ಲಿ ತಯಾರಿಸಿ ಅಥವಾ ಸ್ವತಃ ಕೈಬರಹದಲ್ಲಿ ತಮಗೆ ಅನ್ವಯಿಸುವ ಎಲ್ಲ ಅಂಕಣಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು.

2) ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ನಿಗದಿತ ನಮೂನೆಗಳಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

3) ಹುಟ್ಟಿದ ದಿನಾಂಕವನ್ನು ತೋರಿಸುವ ಬಗ್ಗೆ ದೃಢೀಕೃತ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

4) ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಸ್ಥಳದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು

5) ಅರ್ಜಿ ನಮೂನೆಯೊಂದಿಗೆ ಯಾವುದೇ ಮೂಲ ಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ. ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರ ಪ್ರಮಾಣಪತ್ರಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಗೆ ಲಗತ್ತಿಸತಕ್ಕದ್ದು.

6) ಅಭ್ಯರ್ಥಿಗಳು ಅರ್ಜಿಯೊಂದಿಗೆ ಅವರ ನಡತೆ ಬಗ್ಗೆ ಅವರ ಸಂಬಂಧಿಯಲ್ಲದ ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ 6 ತಿಂಗಳೊಳಗೆ ಪಡೆದ ಎರಡು ಪ್ರಮಾಣ ಪತ್ರಗಳನ್ನು ಹಾಗೂ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ /ಕಾಲೇಜಿನಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

7) ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ತಹಶೀಲ್ದಾರರವರಿಂದ ಒಂದು ವರ್ಷದೊಳಗೆ ಪಡೆದಿರುವ ಪ್ರಮಾಣಪತ್ರದ ದೃಢೀಕೃತ ನಕಲನ್ನು ಲಗತ್ತಿಸತಕ್ಕದ್ದು

8) ಅಭ್ಯರ್ಥಿಗಳು ಅರ್ಜಿಯ ಜೊತೆಯಲ್ಲಿ 5–00 ರೂ.ಗಳ ಅಂಚೆ ಚೀಟಿ ಲಗತ್ತಿಸಿರುವ ಸ್ವವಿಳಾಸವಿರುವ ಲಕೋಟೆಯನ್ನು ಲಗತ್ತಿಸತಕ್ಕದ್ದು ಹಾಗೂ ಯಾವ ಹುದ್ದೆಗೆ ಅರ್ಜಿಯನ್ನು ಸಲ್ಲಿಸುತ್ತಿದ್ದಾರೆಂಬುದನ್ನು ದಪ್ಪ ಅಕ್ಷರದಲ್ಲಿ ಲಕೋಟೆಯ ಮೇಲೆ ನಮೂದಿಸತಕ್ಕದ್ದು.

9) ಯಾವುದೇ ಅಭ್ಯರ್ಥಿಯು ಯಾವುದೇ ಪ್ರವರ್ಗ ಮೀಸಲಾತಿ ಕೋರಿದಲ್ಲಿ ಆಯಾ ಮೀಸಲಾತಿಗೆ ಸಂಬಂಧಿಸಿದ ನಿಗದಿತ ನಮೂನೆಯಲ್ಲಿ ಸಮಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರದ ದೃಢೀಕೃತ ನಕಲನ್ನು ಲಗತ್ತಿಸತಕ್ಕದ್ದು.

ಸಾಮಾನ್ಯ ಸೂಚನೆಗಳು

1) ಅಭ್ಯರ್ಥಿಗಳು ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ಅಕ್ರಮ ಮತ್ತು ಅನುಸೂಚಿತ ಮಾರ್ಗವನ್ನು ಅನುಸರಿಸಿದ್ದಲ್ಲಿ ಅಥವಾ ಪ್ರಭಾರ ಬೀರುವ ಅಂಶ ಕಂಡು ಬಂದಲ್ಲಿ ಅಂತ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವದಿಲ್ಲ.

2) ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿಯ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3) ಸರ್ಕಾರಿ ಮತ್ತು ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮುಚ್ಚಿತ ಮಾರ್ಗದ ಮುಖಾಂತರ ಸಲ್ಲಿಸತಕ್ಕದ್ದು.

4) ಅಭ್ಯರ್ಥಿಗಳು ತಮ್ಮ ಸ್ವತಃ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು ಹಾಗೂ ಸಂಬಂಧಪಟ್ಟ ಎಲ್ಲಾ ಅಸಲು ದಾಖಲೆಗಳನ್ನು ಸಂದರ್ಶನದ ಕಾಲಕ್ಕೆ ಹಾಜರುಪಡಿಸತಕ್ಕದ್ದು.

5) ಅಭ್ಯರ್ಥಿಯು ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಅನರ್ಹರೆಂದು ತಿಳಿಯತಕ್ಕದ್ದು ಹಾಗೂ ಈ ಬಗ್ಗೆ ಯಾವುದೇ ಪತ್ರ ವ್ಯವಹಾರಗಳನ್ನು ನಡೆಸಲಾಗುವದಿಲ್ಲ.

6) ಎಲ್ಲಾ ವಿವರಗಳನ್ನು ನೀಡದ ಹಾಗೂ ಅಪೂರ್ಣವಾದ ಅರ್ಜಿಗಳನ್ನು ಪ್ರಾರಂಭಿಕ ಹಂತದಲ್ಲೇ ತಿರಸ್ಕರಿಸಲಾಗುವುದು.

ಹಂಚಾಟೆ ಸಂಜೀವಕುಮಾರ

ಪಿ.ಆರ್. 134

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.